**ಮಾನ್ಯ ಸಿವಿಲ್ ನ್ಯಾಯಾಧೀಶರು ವ ಜೆ ಎಂ ಎಫ್‌ಸಿ ಮುದ್ದೇಬಿಹಾಳ, ಇವರ ನ್ಯಾಯಾಲಯ**

ಸಿ ಸಿ ನಂಃ 702/2017
ಸಿಡಬ್ಲೂ-11
ಪಿ.ಡಬ್ಲ್ಯೂ-9

ಸಾಕ್ಷಿದಾರನ ಹೆಸರು ಃ ಸಿದ್ದಪ್ಪ ಹೊಸಮನಿ

ತಂದೆ ಹೆಸರು ಃ ತಿಪ್ಪಣ್ಣ

ವಯಸ್ಸು ಃ 47 ವರ್ಷ,

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ ಃ ಪತ್ತೇಪೂರ

(ದಿಃ04/09/2023 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು)

**ಮುಖ್ಯ ವಿಚಾರಣೆ ಸ ಸ ಅ ಅವರಿಂದ**

ಚಾಸಾ 1ರವರ ಪರಿಚಯವಿದೆ. ಮೃತ ಭೀಮಪ್ಪ ಇವರು ನನಗೆ ಮಾವನಾಗಬೇಕು. ನನ್ನ ಮಾವ ಸೈದಾಪೂರ ಮುತ್ಯಾನ ಜಾತ್ರೆಗೆ ಹೋಗಿದ್ದರು. ನನ್ನ ಮಾವನಿಗೆ ರಸ್ತೆ ಅಪಘಾತವಾಗಿ ಅವರು ಸ್ಥಳದಲ್ಲಿಯೇ ತೀರಿಹೋಗಿರುವ ವಿಷಯ ನಮಗೆ ಬೇರೆಯವರಿಂದ ಗೊತ್ತಾಗಿರುತ್ತದೆ. ನಾನು ಆ ಸಮಯದಲ್ಲಿ ಪತ್ತೇಪೂರ ಗ್ರಾಮದಲ್ಲಿ ಇದ್ದೆ. ನಂತರ ನಾನು ನನ್ನ ಮಾವನಿಗೆ ಹೋಗಿ ನೋಡಲಾಗಿ ಆತನ ಕೈ ಮತ್ತು ಕಾಲುಗಳು ಮುರಿದಿದ್ದವು. ಅಪಘಾತಕ್ಕೀಡಾದ ವಾಹನ ಸಂಖ್ಯೆ 0615 ಅಂತಾ ಇರುತ್ತದೆ. ಅಪಘಾತಪಡಿಸಿದ ವ್ಯಕ್ತಿಯ ಹೆಸರು ರಂಜಾನಸಾಬ ಅಬ್ಬಾಶಾ ಮಕಾನದಾರ ಎಂದು ಆಮೇಲೆ ನನಗೆ ಗೊತ್ತಾಗಿರುತ್ತದೆ. ಆರೋಪಿತನನ್ನು ನನಗೆ ಠಾಣೆಯಲ್ಲಿ ತೋರಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತ ಸದರಿ ದಿನ ಠಾಣೆಯಲ್ಲಿ ನೋಡಿರುತ್ತೇನೆ.

**ಪಾಟಿ ಸವಾಲುಃ ಆರೋಪಿ ಪರವಾಗಿ ಶ್ರೀ ಆರ್ ವಾಯ್ ಎನ್ ವಕೀಲರಿಂದ**

ಮೃತ ಭೀಮಪ್ಪ ನನ್ನ ಮಾವನಾಗಬೇಕು. ಚಾಸಾ 1 ನನಗೆ ಅಳಿಯನಾಗಬೇಕು. ಭೀಮಪ್ಪನವರ ಕುಟುಂಬಕ್ಕೆ ಅನುಕೂಲ ಆಗಲೀ ಎಂದು ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಮತ್ತು ಘಟನೆಯ ಕುರಿತು ನನಗೆ ವಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಆರೋಪಿ ನಮ್ಮ ಗ್ರಾಮದವನು ಎಂದರೆ ಸರಿ. ನನ್ನ ಮತ್ತು ಆರೋಪಿತನ ಮಧ್ಯೆ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿತನ ಮಧ್ಯೆ ವೈಮನಸ್ಸು ಇದ್ದ ಕಾರಣ ಆರೋಪಿತನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ಕುರಿತು ನನಗೆ ಬೇರೆಯವರಿಂದ ಗೊತ್ತಾಗಿರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದು ನ್ಯಾಯಾಲಯಕ್ಕೆ ಚಾಸಾ 1, 10 ಮತ್ತು ನಾನು ಬಂದಿರುತ್ತೇವೆ ಎಂದರೆ ಸರಿ. ಚಾಸಾ 1 ರವರ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಭಾಗಿಯಾದ ವಾಹನದ ಸಂಖ್ಯೆ 0615 ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನದ ಸಂಖ್ಯೆಯನ್ನು ಖುದ್ದಾಗಿ ಕೊಡಗಾನೂರ ಗ್ರಾಮದಲ್ಲಿ ನೋಡಿರುತ್ತೇನೆ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಸಹಿತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಓ ಹೇ ಕೇ ಸರಿ ಅದೆ.

ನ್ಯಾ ದಂ ಪ್ರ ವರ್ಗ, ಮುದ್ದೇಬಿಹಾಳ.